| Form No.4 (Civil) Deposition Sheets (R.P.No.57) |
|---|

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 96/2019

ಪ್ರಾ.ಸಾ. 3 ಚಾ.ಸಾ 4

| | | |
|---|---|---|
| ಹೆಸರು | : | ಆಜಪ್ಪ |
| ತಂದೆಯ ಹೆಸರು | : | ಶಂಕ್ರಪ್ಪ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ವರ್ಕನಳ್ಳಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 05-05-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ರವರ ಪರಿಚಯ ಇರುತ್ತದೆ. ಚಾಸಾ-5 ರವರ ಪರಿಚಯ ಇರುವುದಿಲ್ಲ. ಪೊಲೀಸರು ನನ್ನನ್ನು ಮತ್ತು ಚಾಸಾ-5 ರವರನ್ನು ಸುಮಾರು 5-6 ವರ್ಷಗಳ ಹಿಂದೆ ಚಾಸಾ-1 ರವರ ಮನೆಗೆ ಕರೆಸಿದ್ದರು. ಸುಮಾರು 8.00-9.00 ಗಂಟೆ ಸುಮಾರು ಪೊಲೀಸರು ನನ್ನನ್ನು ಕರೆಯಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿದಾರರಿಗೆ ಈಗ ಪಂಚನಾಮೆಯನ್ನು ತೋರಿಸಿಲಸಗಿದ್ದು ಅದನ್ನು **ನಿ.ಪಿ.7** ಎಂದು ಸಾಕ್ಷಿದಾರರ ಸಹಿಯನ್ನು **ನಿ,ಪಿ.7(ಎ)** ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಈಗ ನಾಲ್ಕು ಭಾವಚಿತ್ರಗಳನ್ನು ತೋರಿಸಲಾಗಿದ್ದು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.2 ರಿಂದ 5 ಎಂದು ಗುರುತಿಸಲಾಗಿದೆ.

2. ಇದನ್ನು ಹೊರತು ಪಡಿಸಿ ಪೊಲೀಸರು ನನ್ನ ಸಮಕ್ಷಮ ಬೇರೆ ಏನನ್ನು ಮಾಡಿರುವುದಿಲ್ಲ. ಸಾಕ್ಷಿದಾರರಿಗೆ ಈಗ ಜಪ್ತಿ ಪಂಚನಾಮೆಯನ್ನು

ತೋರಿಸಿದ್ದು ನೋಡಿ ಗುರುತಿದ್ದು ಅದನ್ನು **ನಿ,ಪಿ.8** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.8(ಎ)** ಎಂದು ಗುರುತಿಸಲಾಯಿತು.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

3. ದಿಃ 17.07.2019 ರಂದು ನನ್ನನ್ನು ಹಾಗೂ ಚಾಸಾ-5 ರವರನ್ನು ಗ್ರಾಮೀಣ ಪೊಲೀಸ ಠಾಣೆಗೆ ಕರೆಯಿಸಿ ಪೊಲೀಸರು ಹಾಜರುಪಡಿಸಿದ ಮೃತಳ ಮೈಮೇಲಿನ ನೈಟಿ ಹಾಗೂ ಸೀರೆಯನ್ನು ಸಾಯಂಕಾಲ 6.30-7.30 ಗಂಟೆಯವರೆಗೆ ಜಪ್ತಿ ಪಂಚನಾಮೆ ಮಾಡಲಾಯಿತು ಎಂದರೆ ಸರಿಯಲ್ಲ. ನಿ.ಪಿ.8 ಅನ್ನು ಸ್ಥಳದಲ್ಲಿಯೇ ಬರೆದು ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಿಃ 18.07.2019 ರಂದು ಬೆಳಿಗ್ಗೆ 10.30 – 11.30 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಎ.ಕ್ಯೂ. ವಕೀಲರಿಂದ

4. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ನಾನು ಸ್ವಂತ ಒಕ್ಕಲುತನ ಮಾಡುತ್ತೇನೆ. ಚಾಸಾ-1 ರವರ ಮನೆಗೆ ಬನ್ನಿ ಎಂದು ನನ್ನನ್ನು ಯಾರು ಕರೆದಿರುವುದಿಲ್ಲ. ಆ ಮನೆಯಲ್ಲಿ ಬರೆದ ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಾನು ಅಲ್ಲಿಗೆ ಹೋಗಿದೆ ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ. ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ದಿಃ 18.07.2019 ರಂದು ಬೆಳಿಗ್ಗೆ 10.30 –

11.30 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.